(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿ:06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಸಿ.ಹೆಚ್.ಆರ್ ವಕೀಲರಿಂದ :

38. ದಿನಾಂಕ 07.07.2002 ರಲ್ಲಿ ಒಂದು ಕ್ರಯ ಪತ್ರವನ್ನು ನಾನು ನನ್ನ ತಂದೆಯ ಕಡೆಯಿಂದ ಪಡೆದಿದ್ದೇನೆ. ಸದರಿ ಕ್ರಯ ಪತ್ರವನ್ನು ನನ್ನ ತಂದೆ ಒಂದು ಜಿಪಿಎಯ ಆಧಾರದ ಮೇಲೆ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಜಿಪಿಎ ದಿನಾಂಕ 17.06.1985 ರಂದು ಆಗಿತ್ತು ಎಂದರೆ ಸರಿ. ಸದರಿ ಜಿಪಿಎಯನ್ನು ತಿದ್ದುಪಡಿ ಪತ್ರ ಮಾಡುವುದಕ್ಕಾಗಿ ವೆಂಕಟಸುಬ್ಬಮ್ಮ ಅವರು ನನ್ನ ತಂದೆಗೆ ಬರೆದುಕೊಟ್ಟಿದ್ದರು. ತಿದ್ದುಪಡಿ ಮಾಡಬೇಕಾದ ಕ್ರಯ ಪತ್ರದ ದಿನಾಂಕ 09.05.1973. ಸದರಿ ಕ್ರಯ ಪತ್ರದ ಸರ್ವೇ ನಂ.6/2 ಎಂದು ತಪ್ಪಾಗಿ ಮಾಡಿದ್ದು ಸರ್ವೇ ನಂ.9 ಆಗಬೇಕಾಗಿದ್ದು ಅದರ ವಿಸ್ತೀರ್ಣ 10 ಗುಂಟೆ, ಕದಿರೇನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿಯಾಗಿದೆ. ಸದರಿ ಸರ್ವೇ ನಂಬ್ರವನ್ನು ರಿಜಿಸ್ಟ್ರಿ ಮಾಡುವ ಸಂದರ್ಭದಲ್ಲಿ ನಾನು ಇದ್ದಿರಲಿಲ್ಲ ಎಂದರೆ ಸರಿ.

ನಿಜವಾಗಿಯೂ ಯಾವ ಸರ್ವೇ ನಂಬ್ರದ ಮೇರೆಗೆ ಕ್ರಯ ಪತ್ರವನ್ನು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿನಾಂಕ 09.05.1973 ರ ಕ್ರಯ ಪತ್ರಕ್ಕೆ ನಾನಾಗಲೀ ನನ್ನ ತಂದೆಯಾಗಲೀ ಸಾಕ್ಷಿದಾರರಲ್ಲ ಎಂದರೆ ಸರಿ. ಸದರಿ ಕ್ರಯ ಪತ್ರದ ಶೆಡ್ಯೂಲಿನಲ್ಲಿ ಸರ್ವೇ ನಂ.6/2 ಎಂದು ತೋರಿಸಿದ್ದು ಸದರಿ ಜಾಗದ ಮಾಲೀಕರು ವಾದಿ ಎಂದು ಹೇಳಿ ಅವರು ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು.

39. ವಾದಿ ಮತ್ತು ಅವರ ಮನೆಯವರು ಯಾವ ಯಾವ ಸರ್ವೇ ನಂಬ್ರಗಳ ಮಾಲೀಕರು ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಸರ್ವೇ ನಂ.9 ರ ಬಗ್ಗೆ ನನಗೆ ಗೊತ್ತಿದೆ ಉಳಿದಂತೆ ಬೇರೆ ಸರ್ವೇ ನಂಬ್ರಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.4, 6/2 ಹಾಗೂ 9 ರ ಜಾಗಗಳ ಮೂಲ ಮಾಲೀಕರು ವಾದಿಗಳು ಎಂದರೆ ಸುಳ್ಳು. ಸರ್ವೇ ನಂ.6/2 ರ 1 ಎಕರೆ 27 ಗುಂಟೆ ಜಾಗಗಳಿಗೆ ವಾದಿಗಳು ಮಾಲೀಕರು ಎಂದರೆ ಸುಳ್ಳು. ಅದೇ ರೀತಿ ಸರ್ವೇ ನಂ.9 ರ 6.18 ಗುಂಟೆಗಳಿಗೆ ವಾದಿ ಮಾಲೀಕರು ಎಂದರೆ ಸರಿ.

40. ಸರ್ವೇ ನಂ.6/2 ವಾದಿಯ ಮೂಲ ಪುರುಷ ಗೌಡರ ಅಣ್ಣಯ್ಯಪ್ಪ ಎಂಬುವವರಿಗೆ ಇನಾಮ್ತಿ ಗ್ರಾಂಟ್ ಆಗಿ ಬಂದಿದೆ ಎಂದರೆ ಸುಳ್ಳು. ಸದರಿ ಇನಾಮ್ತಿ ಗ್ರಾಂಟ್ ಗೆ ಸಂಬಂಧಿಸಿದ ದಾಖಲೆಗಳನ್ನು ಒ.ಎಸ್.1308/1987 ರಲ್ಲಿ ನಾನು ನೋಡಿದ್ದು ಅದನ್ನು ನನಗೆ ಪಾಟಿ ಸವಾಲು ಮಾಡುವ ಸಂದರ್ಭದಲ್ಲಿ ತೋರಿಸಲಾಗಿದೆ ಎಂದರೆ ಸುಳ್ಳು.

ಸದರಿ ದಾಖಲೆಗಳ ಬಗ್ಗೆ ನನಗೆ ಪಾಟಿ ಸವಾಲು ಮಾಡಲಾಗಿದೆ ಎಂದರೆ ಸುಳ್ಳು. ನನ್ನ ತಂದೆಯಿಂದ ನನಗೆ ಬಂದಿದೆ ಎಂದು ಹೇಳಲಾದ ಜಾಗ ವಿವಾದಿತ ಜಾಗ ಎಂದರೆ ಸುಳ್ಳು. ಒ.ಎಸ್.1308/1987 ರ ದಾವೆಯಲ್ಲಿ ನನ್ನ ತಂದೆಯಿಂದ ನನಗೆ ಬಂದ ಜಾಗದ ಮಾಲೀಕತ್ವದ ಬಗ್ಗೆ ದಾವೆ ಬಾಕಿ ಇದೆ ಎಂದರೆ ಸರಿ.

41. ವೆಂಕಟಸುಬ್ಬಮ್ಮ ಅವರು ನನ್ನ ತಂದೆಗೆ ಯಾವುದೇ ಕ್ರಯ ಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸುಳ್ಳು. ವೆಂಕಟಸುಬ್ಬಮ್ಮ ಅವರು ನನ್ನ ತಂದೆಗೆ ಕ್ರಯ ಪತ್ರ ಅಥವಾ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರಾ ಎಂದರೆ ಮಾಡಿಲ್ಲ ಬದಲಾಗಿ ಜಿಪಿಎ ಮಾಡಿಕೊಟ್ಟಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ವೆಂಕಟಸುಬ್ಬಮ್ಮ ಅವರು ನನ್ನ ತಂದೆಗೆ ಜಿಪಿಎ ಮಾಡಿಕೊಟ್ಟಿರುವುದು ಕೇಸು ನಡೆಸಲು ಮಾತ್ರ ಎಂದರೆ ಸುಳ್ಳು. ಸದರಿ ಜಿಪಿಎ ಆಧಾರದ ಮೇರೆಗೆ ನನ್ನ ತಂದೆಯೇ ಕೇಸು ನಡೆಸುತ್ತಿದ್ದರು ಎಂದರೆ ಸುಳ್ಳು.

42. 1985 ರ ಮೊದಲು ವಾದಿಯ ಕುಟುಂಬದವರು ಈ ಆಸ್ತಿಯ ಮೇಲೆ ಎಷ್ಟು ದಾವೆಯನ್ನು ಹಾಕಿದ್ದರು ಎಂದರೆ ಸಾಕ್ಷಿ ಒಂದೇ ದಾವೆ ಬಾಕಿ ಇದೆ ಎಂದು ನುಡಿಯುತ್ತಾರೆ. ಸದರಿ ದಾವೆಯ ನಂಬ್ರ ನನಗೆ ನೆನಪಿಲ್ಲ. ಒ.ಎಸ್.466/1979, ಒ.ಎಸ್.627/1980, ಒ.ಎಸ್.580/1980 ಮತ್ತು ಮಿಸ್.115/1983 ಗಳ ದಾವೆಗಳು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ, ಬೆಂಗಳೂರು ಅವರ ಎದುರು ಬಾಕಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಒ.ಎಸ್.1308/1987 ರ ದಾವೆಯಲ್ಲಿ ಕೇಳಿದ

ನಿವೃತ್ತಿಯನ್ನೇ ಮೇಲೆ ಹೇಳಿದ ದಾವೆಗಳಲ್ಲಿ ಕೇಳಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಗಳ ವಾದಿಗಳು ಸದರಿ ದಾವೆಗಳಲ್ಲಿ ಸರಿಯಾದ ಸಮಯದಲ್ಲಿ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಆ ಎಲ್ಲಾ ದಾವೆಗಳು ವಜಾ ಆಗಿದ್ದವು ಎಂದರೆ ಸುಳ್ಳು. ಸದರಿ ಎಲ್ಲಾ ದಾವೆಗಳನ್ನು ವೆಂಕಟಸುಬ್ಬಮ್ಮ ಅವರೇ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಒ.ಎಸ್.467/1979 ರಂತೆ ನನ್ನ ಮೇಲೂ ಸಹ ವೆಂಕಟಸುಬ್ಬಮ್ಮ ಅವರು ಒಂದು ದಾವೆ ಸಲ್ಲಿಸಿರುವುದು ನನಗೆ ಗೊತ್ತಿಲ್ಲ.

43. ವೆಂಕಟಸುಬ್ಬಮ್ಮ ಅವರಿಗೆ 10 ಗುಂಟೆ ಜಾಗ ಎಲ್ಲಿ ಇದೆ ಎಂದು ಅವರಿಗೇ ಗೊತ್ತಿಲ್ಲ ಎಂದರೆ ಸರಿಯಲ್ಲ. 1973 ರಿಂದ ಇಂದಿನವರೆಗೂ 10 ಗುಂಟೆ ಜಾಗದ ಬಗ್ಗೆ ವೆಂಕಟಸುಬ್ಬಮ್ಮ ಅವರ ಹೆಸರಿನಲ್ಲಿ ಯಾವುದೇ ಪ್ರಾಧಿಕಾರದ ಎದುರು ಯಾವುದೇ ದಾಖಲೆಗಳು ಇಲ್ಲ ಎಂದರೆ ಸುಳ್ಳು. ಗ್ರಾಮ ಪಂಚಾಯಿತಿಯಿಂದ ವೆಂಕಟಸುಬ್ಬಮ್ಮ ಅವರಿಗೆ ನೀಡಿದ ಖಾತಾವನ್ನು ನಾನು ನೋಡಿದ್ದು ಅದನ್ನು ನಾನು ಬಿಬಿಎಂಪಿಗೆ ನೀಡಿದ್ದೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ ಯಾಕೆಂದರೆ ನಾನು ಅದನ್ನು ಈಗಾಗಲೇ ಬಿಬಿಎಂಪಿಗೆ ನೀಡಿದ್ದೇನೆ. ವೆಂಕಟಸುಬ್ಬಮ್ಮ ಅವರು ಸದರಿ ಜಾಗವನ್ನು ಅಭಿವೃದ್ಧಿ ಪಡಿಸಲು ಯಾವುದಾದರೂ ಪ್ಲಾನ್ ಪಡೆದಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿ ಯಾವುದೇ ಕಟ್ಟಡಗಳನ್ನು ಕಟ್ಟಿಲ್ಲ. ಸದರಿ ಸ್ಥಳದ ಬಗ್ಗೆ ವೆಂಕಟಸುಬ್ಬಮ್ಮ ಆಗಲೀ ನನ್ನ ತಂದೆಯಾಗಲೀ ಯಾವುದೇ

ಪ್ರಾಧಿಕಾರದ ಎದುರು ತೆರಿಗೆ ಕಟ್ಟುತ್ತಿಲ್ಲ ಎಂದರೆ ಸರಿಯಲ್ಲ. ಇಂದಿನವರೆಗೂ ಬಿಬಿಎಂಪಿಯ ಎದುರು ನಾನು ಸದರಿ ಜಾಗಗಳಿಗೆ ತೆರಿಗೆ ಕಟ್ಟುತ್ತಿದ್ದೇನೆ. ಮುಂದಿನ ದಿನಾಂಕದಂದು ನನಗೆ ನಾನು ಪಾವತಿ ಮಾಡಿದ ತೆರಿಗೆ ಪಾವತಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ದಾವೆ ನಡೆಯುತ್ತಿದ್ದ ಕಾರಣ ಖಾತಾ ನೀಡುವುದಿಲ್ಲ ಎಂದು ಬಿಬಿಎಂಪಿಯವರು ಈಗಾಗಲೇ ಹಿಂಬರಹ ನೀಡಿದ ಕಾರಣ ಅದನ್ನು ಹಾಜರುಪಡಿಸಲು ಸಾಧ್ಯವಿಲ್ಲ ಆದರೆ ವಿದ್ಯುತ್ ಟ್ಟಕ್ತಿ ಪಾವತಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. 1973 ರಿಂದ ಇಂದಿನವರೆಗೂ ಸಹ ಸ್ವಾಧೀನದಲ್ಲಿ ಇಲ್ಲದ ಕಾರಣ ಅವರ ಹೆಸರಿನಲ್ಲಿ ಯಾವುದೇ ಸ್ವಾಧೀನಕ್ಕೆ ಸಂಬಂಧಿಸಿದ ದಾಖಲೆಗಳು ಇಲ್ಲ ಎಂದರೆ ಸುಳ್ಳು.

44. ಒ.ಎಸ್.1308/1987 ನ್ನು ನನ್ನ ತಂದೆ ಹಾಕಿದ್ದರು. ನನ್ನ ತಂದೆ ವೆಂಕಟಸುಬ್ಬಮ್ಮ ಅವರ ಜಿಪಿಎ ಹೋಲ್ಡರ್ ಆಗಿ ಸದರಿ ದಾವೆಯನ್ನು ಹಾಕಿದ್ದರು. ಸದರಿ ವೆಂಕಟಸುಬ್ಬಮ್ಮ ಈಗ ಬದುಕಿಲ್ಲ. ಒ.ಎಸ್.1308/1987 ದಿನಾಂಕ 18.12.2001 ರಂದು ಡಿಕ್ರಿಯಾಗಿತ್ತು ಎಂದರೆ ಸರಿ. ಅದರ ವಿರುದ್ಧ ವಾದಿಯ ಕುಟುಂಬದವರು ಮಾನ್ಯ ಉಟ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ.

45. ನಿ.ಪಿ.1 ನನ್ನ ತಂದೆಯಿಂದ ನನಗೆ ಬಂದ ಕ್ರಯ ಪತ್ರ ಎಂದರೆ ಸರಿ. ನಿ.ಪಿ.1 ರ ಕ್ರಯ ಪತ್ರವನ್ನು ಮಾಡುವ ಮೊದಲು ನಾನು ನನ್ನ ವಕೀಲರಿಂದಲೇ ಕಾನೂನು ಸಲಹೆ ಪಡೆದುಕೊಂಡಿದ್ದೇನೆ. ನಾನು

ಕಾನೂನು ಸಲಹೆಯನ್ನು ಮೌಖಿಕವಾಗಿ ಪಡೆದುಕೊಂಡಿದ್ದೇನೆ. ಕ್ರಯ ಪತ್ರವನ್ನು ಮಾಡಿಕೊಳ್ಳುವ ಮೊದಲು ಪತ್ರಿಕಾ ಪ್ರಕಟಣೆ ನೀಡಿಲ್ಲ. ನಿ.ಪಿ.1 ನ್ನು ಮಾಡಿಕೊಳ್ಳುವ ಮೊದಲು ಕ್ರಯದ ಕರಾರು ಪತ್ರ ಆಗಿತ್ತು. ಸದರಿ ಕ್ರಯದ ಕರಾರು ಪತ್ರದ ದಿನಾಂಕ 05.05.1988. ಸದರಿ ಕ್ರಯದ ಕರಾರು ಪತ್ರವನ್ನು ನಾನು ನನ್ನ ವಕೀಲರಿಗೆ ನೀಡಿದ್ದೇನೆ. ಅವರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರಾ ಎಂದು ನನಗೆ ಗೊತ್ತಿಲ್ಲ.

46. ಆರ್.ಎಫ್.ಎ.358/2002 ಬಾಕಿ ಇರುವ ಸಂದರ್ಭದಲ್ಲಿ ನಾನು ನಿ.ಪಿ.1 ರಂತೆ ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ಸದರಿ ಆರ್.ಎಫ್.ಎ ಈಗ ಬಾಕಿ ಇಲ್ಲ. ಮಾಲೀಕತ್ವದ ಬಗ್ಗೆ ತಕರಾರು ಇದ್ದಾಗ ಮತ್ತು ದಾವೆ ಬಾಕಿ ಇರುವ ಸಂದರ್ಭದಲ್ಲಿ ಯಾವ ಕಾರಣಕ್ಕಾಗಿ ಕ್ರಯ ಪತ್ರ ಮಾಡಿಕೊಂಡಿದ್ದೀರೀ ಎಂದರೆ ಸಾಕ್ಷಿ ನಾನು ಕ್ರಯ ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ಯಾವುದೇ ದಾವೆ ಬಾಕಿ ಇರಲಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿರುವ ಸಾಕ್ಷಿದಾರರು ನನ್ನ ಕುಟುಂಬದವರು ಎಂದರೆ ಸರಿ. ನಿ.ಪಿ.1 ರಲ್ಲಿ ಸ್ವಾಧೀನತೆಯ ಬಗ್ಗೆ ಉಲ್ಲೇಖಿಸಿದ ಉಲ್ಲೇಖಗಳು ಸುಳ್ಳು ಎಂದರೆ ಸರಿಯಲ್ಲ. ನಿ.ಪಿ.1 ರ ದಾಖಲೆಯನ್ನು ಕಾನೂನು ಬಾಹಿರವಾಗಿ ನಾನು ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ನಿ.ಪಿ.1 ರ ದಾಖಲೆಯನ್ನು ಮಾಡಿಕೊಳ್ಳುವ ಮೊದಲು ನನ್ನ ತಂದೆಯ ಹೆಸರಿಗೆ 10 ಗುಂಟೆಯ ಜಾಗದ ಬಗ್ಗೆ ಯಾವುದೇ ದಾಖಲೆಗಳು ಬಂದಿಲ್ಲ. ಸಾಕ್ಷಿ ಮುಂದುವರಿದು ಜೆಪಿಎ ಮಾತ್ರ ಇತ್ತು ಎಂದು ನುಡಿಯುತ್ತಾರೆ. ಕ್ರಯ ಪತ್ರ ಮಾಡಿಕೊಳ್ಳುವ ಮೊದಲು ನನ್ನ

ತಂದೆ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದರೆ ಸುಳ್ಳು. ಕ್ರಯ ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ನನ್ನ ತಂದೆ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನನಗೆ ನೀಡಿರಲಿಲ್ಲ. 1985 ರಿಂದ ನಾನು ದಾವ ಆಸ್ತಿಯ ಸ್ವಾಧೀನದಲ್ಲೇ ಇದ್ದೇನೆ ಎಂದು ತೋರಿಸಲು ನಾನು ತೆರಿಗೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಕ್ರಯ ಪತ್ರದ ಸಂದರ್ಭದಲ್ಲಿ ಸ್ವಾಧೀನವನ್ನು ನನಗೆ ಹಸ್ತಾಂತರಿಸಲಾಗಿದೆ ಎಂದು ತೋರಿಸಲು ಖಾತೆ ಹಾಗೂ ಕಂದಾಯ ದಾಖಲೆಗಳನ್ನು ನನಗೆ ನೀಡಿದ್ದಾರೆ.

47. 1985 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ. 1985 ರಲ್ಲಿ ಕ್ರಯ ಪತ್ರದ ಮೌಲ್ಯವಾದ 1 ಲಕ್ಷವನ್ನು ನಾನು ನನ್ನ ತಂದೆಗೆ ನೀಡಿದ್ದೇನೆ. ದಾವಾ ಆಸ್ತಿಯನ್ನು ವಾದಿಯ ಕುಟುಂಬದಿಂದ ಲಪಟಾಯಿಸುವುದಕ್ಕೋಸ್ಕರ ಸಾಂಕೇತಿಕ ಕ್ರಯ ಪತ್ರವನ್ನು ಮಾಡಿಕೊಂಡು ನನ್ನ ತಂದೆಗೆ ಸಾಂಕೇತಿಕವಾಗಿ ಕ್ರಯದ ಪ್ರತಿಫಲ ನೀಡಿದ್ದೇನೆ ಎಂದರೆ ಸುಳ್ಳು. 2004 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯ 5-6 ಕೋಟಿ ಇದ್ದರಬಹುದು ಎಂದರೆ ಸುಳ್ಳು. 1 ಲಕ್ಷ ರೂಪಾಯಿಗಳನ್ನು ನನ್ನ ತಂದೆಗೆ ಕ್ರಯದ ಪ್ರತಿಫಲವಾಗಿ ನೀಡಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ನಾನು ದಿನಾಂಕ 05.05.1988 ರ ಕರಾರು ಪತ್ರದ ಅಡಿಯಲ್ಲಿ

ನಾನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರದಡಿಯಲ್ಲಿ 1 ಲಕ್ಷ ರೂಪಾಯಿಯನ್ನು ನಾನು ನನ್ನ ತಂದೆಗೆ ನೀಡಿದ್ದೇನೆ ಎಂಬ ವಿಚಾರವನ್ನು ನನ್ನ ಲಿಖಿತ ತಕರಾರಿನಲ್ಲಿ ಹೇಳಿಲ್ಲ ಎಂದರೆ ನನಗೆ ಜ್ಞಾಪಕ ಇಲ್ಲ.

48. ದಾವಾ ಆಸ್ತಿ ವಿವಾದಿತ ಆಸ್ತಿಯಾಗಿದ್ದರೂ ಸಹ ಮತ್ತು ದಾವಾ ಆಸ್ತಿಯ ಬಗ್ಗೆ ದಾವೆಗಳು ಬಾಕಿ ಇರುವ ಸಂದರ್ಭದಲ್ಲಿ ನಾನು ನನ್ನ ತಂದೆಯ ಜೊತೆ ಸೇರಿ ಕ್ರಯ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ಸದರಿ ಕ್ರಯ ಪತ್ರದಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

49. ನಿ.ಪಿ.1 ರ ಶೆಡ್ಯೂಲಿನಲ್ಲಿ ಪೂರ್ವದ ಚೆಕ್ಕು ಬಂದಿಯನ್ನು ತೋರಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಸರ್ವೇ ನಂ.6/2 ರ ಉಳಿಕೆ ಜಾಗ ಇದೆ ಎಂದರೆ ಸುಳ್ಳು. ಅದೇ ರೀತಿ ದಾವಾ ಆಸ್ತಿಯ ಪಶ್ಚಿಮಕ್ಕೆ 20 ಅಡಿ ರಸ್ತೆ ಮತ್ತು ಮಾರಾಟಗಾರರಿಗೆ ಸೇರಿದ ಜಾಗ ಎಂದು ಉಲ್ಲೇಖ ಆಗಿದೆ ಎಂದರೆ ಸರ್ವೇ ನಂ.6/2, ಕದಿರೇನಹಳ್ಳಿ ಗ್ರಾಮ ಎಂದರೆ ಸುಳ್ಳು. ನಿ.ಡಿ.2 ರ ಪ್ರಕಾರ ದಾವಾ ಆಸ್ತಿಯ ಪೂರ್ವಕ್ಕೆ ಇದೇ ಸರ್ವೇ ನಂಬ್ರಕ್ಕೆ ನಾವು ಉಳಿಸಿಕೊಂಡಿರುವ ಜಮೀನು, ಪಶ್ಚಿಮಕ್ಕೆ 20 ಅಡಿ ಅಗಲದ ರಸ್ತೆ, ಉತ್ತರಕ್ಕೆ 6 ನೇ ಸರ್ವೇ ನಂಬ್ರದ ಜಮೀನು ಮತ್ತು ದಕ್ಷಿಣಕ್ಕೆ 10 ಮತ್ತು 11 ಎಂದು ಬರೆದಿದೆ. ನಿ.ಪಿ.1 ರ ಪ್ರಕಾರ ದಾವಾ ಆಸ್ತಿಯ ಪೂರ್ವಕ್ಕೆ ಸರ್ವೇ ನಂ.9 ರ ಉಳಿಕೆ ಜಮೀನು ಹಾಲಿ ಶೀನಪ್ಪನವರ ಜಮೀನು,

ಪಶ್ಚಿಮಕ್ಕೆ 20 ಅಡಿ ಅಗಲದ ರಸ್ತೆ ಕ್ರಯದಾರರಿಗೆ ಸೇರಿದ ಸ್ವತ್ತು, ಉತ್ತರಕ್ಕೆ ಸರ್ವೇ ನಂ.6/1 ಮತ್ತು ದಕ್ಷಿಣಕ್ಕೆ 10 ಮತ್ತು 11 ಎಂದು ಬರೆದಿದೆ. ನಿ.ಪಿ.1 ರ ಶೆಡ್ಯೂಲಿನಲ್ಲಿ ಪೂರ್ವ ಹಾಗೂ ಪಶ್ಚಿಮದ ಚೆಕ್ಕುಬಂದಿಗಳನ್ನು ನಾನು ಸೃಷ್ಟಿಸಿ ಬರೆದಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಯ 4 ದಿಕ್ಕುಗಳಲ್ಲಿ ಸರ್ವೇ ನಂ.9/2, ಕದಿರೇನಹಳ್ಳಿ ಗ್ರಾಮ ಎಂದು ಇಲ್ಲ ಎಂದರೆ ಸುಳ್ಳು.

(ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಪ್ರಶಾಂತಿ.ಜಿ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**